**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ.ನಂ. 593/2023**

ಫಿರ್ಯಾದಿ : ಸರ್ಕಾರದ ಪರವಾಗಿ ಸರಗೂರು ಪೋಲೀಸ್ ಠಾಣೆ

– ವಿರುದ್ಧ –

ಆರೋಪಿತರು :
1. ಶ್ರೀ ಚಿಕ್ಕಚೆನ್ನನಾಯಕ
   ಬಿನ್ ಲೇಟ್ ಚನ್ನನಾಯಕ
   55 ವರ್ಷ
2. ಶ್ರೀ ಬೆಟ್ಟನಾಯಕ
   ಬಿನ್ ಚಿಕ್ಕಚನ್ನನಾಯಕ
   30 ವರ್ಷ
3. ಶ್ರೀ ರವಿನಾಯಕ
   ಬಿನ್ ಲೇಟ್ ಹನುಮನಾಯಕ
   58 ವರ್ಷ

ಎಲ್ಲರ ವಾಸಃ 2 ನೇ ವಾರ್ಡ್, ಸರಗೂರು ಟೌನ್,
ಸರಗೂರು ತಾಲ್ಲೂಕು.
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಸುರೇಶ.ಎಸ್.ಎನ್., ಬಿ.ಎ., ಎಲ್.ಎಲ್.ಬಿ, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಸರಗೂರು ಪೊಲೀಸ್ ಠಾಣಾ ಸರಹದ್ದು, ಹಳಿಯೂರು ಗ್ರಾಮದಲ್ಲಿ ಚಾ.ಸಾ.1/ಮಲೆನಿಂಗಯ್ಯ ರವರಿಗೆ ಸೇರಿದ ಸರ್ವೇ ನಂ.50 ರಲ್ಲಿ 4 ಎಕರೆ ಜಮೀನಿದ್ದು, ಸದರಿ

ಜಮೀನನ್ನು ಚಾ.ಸಾ.1 ರವರು ವ್ಯವಸಾಯ ಮಾಡಿಕೊಂಡು ಬರುತ್ತಿದ್ದು, ಅವರ ಜಮೀನಿನ ಪಕ್ಕದಲ್ಲಿ 1 ನೇ ಆರೋಪಿಯಾದ ನಿಮಗೆ ಸೇರಿದ ಜಮೀನು ಇರುತ್ತದೆ. ಚಾ.ಸಾ.1 ರವರು ವ್ಯವಸಾಯ ಮಾಡುವ ಜಮೀನನ್ನು 1 ನೇ ಆರೋಪಿಯಾದ ನೀವು ನಿಮಗೆ ಸೇರಬೇಕೆಂದು ಆಗಾಗ್ಗೆ ಗಲಾಟೆ ಮಾಡುತ್ತಿದ್ದು, ದಿನಾಂಕ 02.08.2023 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾ.ಸಾ.1 ರಿಂದ 3 ರವರು ಮೇಲ್ಕಂಡ ಜಮೀನಿನಲ್ಲಿ ಚಾ.ಸಾ.4 ರವರಿಗೆ ಸೇರಿದ ಟ್ರಾಕ್ಟರ್ ನಲ್ಲಿ ವ್ಯವಸಾಯ ಮಾಡಿಸುತ್ತಾ ಗಿಡಗಳನ್ನು ತೆಗೆಯುತ್ತಿದ್ದಾಗ ಆರೋಪಿಗಳಾದ ನೀವು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.447 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವು ಮೇಲ್ಕಂಡ ಜಮೀನು ನಿಮಗೆ ಸೇರಬೇಕೆಂದು ಹೇಳಿ ಜಮೀನಿನಲ್ಲಿ ವ್ಯವಸಾಯ ಮಾಡಬೇಡಿ ಎಂದು ಚಾ.ಸಾ.1 ರಿಂದ 3 ರವರನ್ನು ತಡೆದು ಅಕ್ರಮ ತಡೆಯುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.341 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿಯಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮಚ್ಚಿನ ಹಂಡಿನಿಂದ ಚಾ.ಸಾ.1 ರವರ ಬೆನ್ನಿಗೆ ಹೊಡೆದಿದ್ದು, ನಂತರ ಅದೇ ಮಚ್ಚಿನಿಂದ ಚಾ.ಸಾ.2 ರವರ ಎಡ ತೋಳಿಗೆ ಹೊಡೆದು ಸ್ವ-ಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 3 ನೇ ಆರೋಪಿಗಳಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಕೈಗಳಿಂದ ಚಾ.ಸಾ.1 ಮತ್ತು 2 ರವರ ಮೈಕೈಗೆ ಹೊಡೆದಿದ್ದು, 2 ನೇ ಆರೋಪಿಯಾದ ನೀವು ಕೈನಿಂದ ಚಾ.ಸಾ.3 ರವರ ಬೆನ್ನಿಗೆ ಹೊಡೆದು ತಳ್ಳಿ ಕೆಳಗೆ ಬೀಳಿಸಿ ಸ್ವ-ಇಚ್ಛೆಯಿಂದ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂ.323 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯ ಪರಿಮಿತಿಯೊಳಗೆ ಮಾಡಿರುತ್ತೀರಿ.

ಈ ಮೇಲಿನ ದೋಷಾರೋಪಣೆಗಳಿಗಾಗಿ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದೆಂದು ನಿರ್ದೇಶಿಸಿರುತ್ತೇನೆ.

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 06.07.2024

(ಸುರೇಶ.ಎಸ್.ಎನ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೆಚ್.ಡಿ. ಕೋಟೆ.